(ಇಂದು ದಿನಾಂಕ 28-10-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಎಸ್.ಹೆಚ್. ವಕೀಲರಿಂದಃ**

ನಾನು ಖರೀದಿ ಮಾಡಿದ ಸ್ವತ್ತಿನ ಸರ್ವೇ ನಂ. 578 ಹಿಸ್ಸಾ 2 ಆಗಿದ್ದು, ಅದರ ವಿಸ್ತೀರ್ಣ 30 ಗುಂಟೆ ಆಗಿರುತ್ತದೆ. ನಾನು ಸದರಿ ಸ್ವತ್ತನ್ನು 1999 ರಲ್ಲಿ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡುವ ಸಂದರ್ಭದಲ್ಲಿ ಸ್ವತ್ತಿಗೆ ಸಂಬಂಧಪಟ್ಟಂತೆ ಎಷ್ಟು ಜನ ಹಕ್ಕುದಾರರು ಇದ್ದರು ಎಂದು ತಿಳಿದುಕೊಂಡಿರುತ್ತೇನೆ. ನಾನು ಖರೀದಿ ಮಾಡಿದ ಸ್ವತ್ತಿಗೆ 3 ಜನ ಹಕ್ಕುದಾರರಿದ್ದು, ಅವರ ಹೆಸರು ಮಹಾದೇವ ಬಾಬು ಪಟಗಾರ, ರಾಮಯ್ಯ ಬಾಬು ಪಟಗಾರ ಮತ್ತು ನಾಗೇಶ ಬಾಬು ಪಟಗಾರ ಎಂಬುದಾಗಿರುತ್ತದೆ. ನಾನು ಖರೀದಿ ಮಾಡುವ ಸಂದರ್ಭದಲ್ಲಿ ಸ್ವತ್ತಿನ ಒಟ್ಟು ವಿಸ್ತೀರ್ಣ ಇತ್ತು ಎಂದು ನನಗೆ ಗೊತ್ತಿಲ್ಲ. ಮಹಾದೇವ, ರಾಮಯ್ಯ ಮತ್ತು ನಾಗೇಶ ರವರುಗಳಿಗೆ ಸ್ವತ್ತು ಹೇಗೆ ಬಂದಿರುತ್ತದೆ ಎಂಬ ಬಗ್ಗೆ ನಾನು ವಿಚಾರಿಸಿರುವುದಿಲ್ಲ.

ನಾನು ಖರೀದಿ ಮಾಡಿದಂತಹ ಸ್ವತ್ತನ್ನು ದಿನಾಂಕಃ 06-10-1970 ರಂದು ಮಹಾದೇವ, ರಾಮಯ್ಯ ಮತ್ತು ನಾಗೇಶ ರವರುಗಳು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಹಾದೇವ ರವರ ಹೆಸರಿನಲ್ಲಿ ಇದ್ದ ಬಗ್ಗೆ ನನಗೆ ಗೊತ್ತು ಎಂದು ನುಡಿಯುತ್ತಾರೆ. ನಾನು ಖರೀದಿ ಮಾಡಿದಂತಹ ಸ್ವತ್ತಿನಲ್ಲಿ ಮಹಾದೇವ, ರಾಮಯ್ಯ ಮತ್ತು ನಾಗೇಶರವರುಗಳು ಸಾಮೂಹಿಕ ನಾತೆಯಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

ಸರ್ವೇ ನಂ. 578 ಹಿಸ್ಸಾ 2 ರ ಒಟ್ಟು ಕ್ಷೇತ್ರದ ಪೈಕಿ 13 ಗುಂಟೆ ಕ್ಷೇತ್ರ ಸರಕಾರಿ ಆಸ್ಪತ್ರೆಗೆ ನೀಡಲಾಗಿರುತ್ತದೆ ಎಂದರೆ ಸರಿ. ಸರ್ವೇ ನಂ. 578 ಹಿಸ್ಸಾ 2 ರ ಉಳಿಕೆ ಕ್ಷೇತ್ರವಾದ 2 ಎಕರೆ 10 ಗುಂಟೆ

ಕ್ಷೇತ್ರವನ್ನು ಮಹಾದೇವ, ರಾಮಯ್ಯ ಮತ್ತು ನಾಗೇಶರವರುಗಳು ಸಾಮೂಹಿಕವಾಗಿ ಖರೀದಿ ಮಾಡಿ, ಸಾಮೂಹಿಕ ಸ್ವಾಧೀನಾನುಭವದಲ್ಲಿ ಇದ್ದರು ಎಂದರೆ ನನಗೆ ಗೊತ್ತಿಲ್ಲ.

ಸ್ವತ್ತನ್ನು ನಾನು ಸ್ವತಹ ಖರೀದಿ ಮಾಡಿರುತ್ತೇನೆ, ಯಾವುದೇ ಮಧ್ಯವರ್ತಿಗಳ ಮೂಲಕ ಖರೀದಿಸಿರುವುದಿಲ್ಲ. ನಾನು ಖರೀದಿ ಮಾಡುವ ಸಂದರ್ಭದಲ್ಲಿ ನಾನು ಖರೀದಿ ಮಾಡಿದ ಕ್ಷೇತ್ರ ಪ್ರತ್ಯೇಕಗೊಂಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಸಂದರ್ಭದಲ್ಲಿ ಸದರಿ ಕ್ಷೇತ್ರ ಪ್ರತ್ಯೇಕ ಗೊಂಡ ಬಗ್ಗೆ ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನಾನು ಖರೀದಿ ಮಾಡುವ ಪೂರ್ವದಲ್ಲಿ ಅಥವಾ ಖರೀದಿ ಮಾಡುವ ಸಂದರ್ಭದಲ್ಲಿ ಸ್ವತ್ತಿನ ಸರ್ವೇ ಮಾಡಿ, 30 ಗುಂಟೆ ಕ್ಷೇತ್ರವನ್ನು ಪ್ರತ್ಯೇಕೀಕರಣ ಮಾಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸರ್ವೇ ನಂ. 578/2 ರಲ್ಲಿ 2 ಎಕರೆ 10 ಗುಂಟೆ ಕ್ಷೇತ್ರ ಈಗಲೂ ಸಹ ಸಾಮೂಹಿಕ ನಾತೆಯಿಂದ ಇದೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸರ್ವೇ ನಂ. 578 ಹಿಸ್ಸಾ 2 ನ್ನು ಸರ್ವೇ ಮಾಡಿ, ಗಡಿ ಕಲ್ಲು ಹಾಕಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 578/2 ರಲ್ಲಿನ ಕ್ಷೇತ್ರವನ್ನು ಪ್ರತ್ಯೇಕೀಕರಣಗೊಳಿಸಿರುವ ಬಗ್ಗೆ ಯಾವುದೇ ನಕಾಶೆ ಇರುವುದಿಲ್ಲ ಎಂದರೆ ನನಗೆ ಮಾಹಿತಿ ಇಲ್ಲ. ಸರ್ವೇ ನಂ. 578 ಹಿಸ್ಸಾ 2 ಕ್ಕೆ ಸಂಬಂಧಪಟ್ಟಂತೆ ವಾದಿಗಳು ಹಾಗೂ 1 ಮತ್ತು 2 ನೇ ಪ್ರತಿವಾದಿಯರ ನಡುವೆ ಯಾವುದೇ ವಿಭಾಗ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಖರೀದಿ ಮಾಡುವ ಸಂದರ್ಭದಲ್ಲಿ ಮಹಾದೇವ, ರಾಮಯ್ಯ ಮತ್ತು ನಾಗೇಶ ರವರುಗಳು ನನಗೆ ವಿಭಾಗ ಆದ ಬಗ್ಗೆ ಸ್ಥಳ ತೋರಿಸಿರುತ್ತಾರೆ. 1 ನೇ ವಾದಿಗೆ ಕ್ರಯದ ದಸ್ತಾವೇಜು ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯ ಒಪ್ಪಿಗೆ ಪಡೆಯದೇ ದಾಸ್ತಾವೇಜನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸ್ವತ್ತಿನ ಗಡಿ ಗುರುತಿಸಿರುವ ವಿಚಾರಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಡಿ.ಡಬ್ಲ್ಯು.1

ನಾನು ಕ್ರಯದ ಪ್ರತಿಫಲವನ್ನು ಸಂಪೂರ್ಣವಾಗಿ 1 ನೇ ಪ್ರತಿವಾದಿಗೆ ನೀಡಿರುತ್ತೇನೆ. ಕ್ರಯದ ವ್ಯವಹಾರವು ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಮಾತ್ರ ನಡೆದಿದ್ದು, 1 ನೇ ವಾದಿ ಮತ್ತು 2 ನೇ ಪ್ರತಿವಾದಿಗೆ ಸದರಿ ಕ್ರಯದ ವ್ಯವಹಾರ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ಪ್ರತಿವಾದಿ 1ನೇ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ವ್ಯವಹರಣೆಯನ್ನು ನಡೆಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ಆದ ಕ್ರಯದ ವ್ಯವಹಾರವು 1 ನೇ ವಾದಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ